ಆಸ್ಪತ್ರೆಗೆ ದಾಖಲಾಗಿದ್ದಾರೆ. ಸ್ವಾಮಿ, ನಂಜನಗೂಡಿನಿಂದ ಬರುತ್ತಿದ್ದಂಥ ಜನರೂ ಸಹಿತ ಮೈಸೂರಿನಲ್ಲಿ ಕಲುಷಿತ ನೀರನ್ನು ಕುಡಿದು ಅವರು ಸಹ ಸುಮಾರು 20-30 ಜನ ಸತ್ತಿದ್ದಾರೆ. ದಯವಿಟ್ಟು ಜಲಮಂಡಳಿಯ ನೌಕರರನ್ನು ತಾವು ಅಮಾನತ್ತಿನಲ್ಲಿ ಇಡಬೇಕು. ಅಮಾನತ್ತಿನಲ್ಲಿಟ್ಟು ಮತ್ತೆ ಅವರನ್ನು ತನಿಖೆಗೆ ಒಳಪಡಿಸಿ, ಮುಂದೆ ಯಾರೂ ಕೂಡ ಇಂಥ ಕೆಲಸವನ್ನು ಮಾಡದಿರುವಂತೆ ಮಾಡಬೇಕು. ಅವರು ಕರ್ತವ್ಯ ವಿಮುಖರಾದುದರಿಂದ ಮೈಸೂರಿನಲ್ಲಿ ಸುಮಾರು 70 ಜನ ಸಾಯಲು ಕಾರಣವಾಯಿತು. ಅಲ್ಲಿ ಕಲುಷಿತವಾದ ನೀರನ್ನು ಪರೀಕ್ಷೆ ಮಾಡಿದ್ದಾರೆ, ಅದರಲ್ಲಿ ಬ್ಯಾಕ್ಟೀರಿಯ ಕಾಣಿಸಿದೆ ಎಂದು ದೃಢಪಟ್ಟಿದೆ. ಆದ್ದರಿಂದ ದಯವಿಟ್ಟು ಆ ನೌಕರರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದಿರುವುದರಿಂದ ಅವರನ್ನು ಕೂಡಲೇ ಅಮಾನತ್ತಿನಲ್ಲಿ ಇಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಬಿನ್ನವಿಸಿಕೊಳ್ಳುತ್ತೇನೆ.

3. ಭರಮಸಾಗರ ಮತ್ತು ಸುತ್ತಮುತ್ತ ಹಳ್ಳಿಗಳಲ್ಲಿ ಕಾಲರಾ ರೋಗ ಹರಡುತ್ತಿರುವುದು

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಅಧ್ಯಕ್ಷರೇ ಭರಮಸಾಗರ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಇತ್ತೀಚಿನ 3-4 ದಿವಸಗಳಲ್ಲಿ 10 ಜನರು ಸತ್ತು ಹೋಗಿದ್ದಾರೆ. ನಾನು ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕ ಮಾಡಿದಾಗ ಅವರು ಹೇಳುತ್ತಿದ್ದಾರೆ, ಇದು ನೀರಿನಿಂದ ಬಂದಿದೆಯೋ ಅಥವಾ ನಿಜವಾಗಿ ಕಾಲರಾನೋ ಅಥವಾ ಬೇರೆ ರೀತಿ ಅಂದರೆ ಆಹಾರದ ಮೂಲಕ ಇದು ಬಂದಿದೆಯೋ ಎನ್ನುವ ಬಗ್ಗೆ ನಿಖರವಾಗಿ ಅವರು ತೀರ್ಮಾನಕ್ಕೆ ಬಂದಿಲ್ಲ. ಹೀಗಾಗಿ ಜನರು ಸತತವಾಗಿ ಭರಮಸಾಗರ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ನೂರು ಜನರಿಗೆ ಹಾಸಿಗೆ ಇಲ್ಲದೆ ನೆಲದ ಮೇಲೆ ಮಲಗಿದ್ದಾರೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಕಛೇರಿಗೆ ತಿಳಿಸಿದ್ದೇನೆ. ಚೀಫ್ ಸೆಕ್ರೆಟರಿಯವರಿಗೂ ತಿಳಿಸಿದ್ದೇನೆ. ತಕ್ಷಣ ತಾವು ಮೆಡಿಸನ್ಸ್ ಕಳುಹಿಸಬೇಕು ಮತ್ತು ಅಲ್ಲಿ ಆಂಬ್ಯುಲೆನ್ಸ್ ಇಲ್ಲ. ರೋಗಿಗಳನ್ನು ಚಿತ್ರದುರ್ಗ ಆಸ್ಪತ್ರೆಗಾಗಲಿ ಅಥವಾ ದಾವಣಗೆರೆ ಆಸ್ಪತ್ರೆಗಾಗಲಿ ಶಿಫ್ಟ್ ಮಾಡತಕ್ಕಂಥಾದ್ದಕ್ಕೆ ಅಲ್ಲಿ ಯಾವ ಸೌಕರ್ಯವೂ ಇಲ್ಲ. ಇಂಥ ಪರಿಸ್ಥಿತಿ ಅಲ್ಲಿದೆ. ಇತ್ತೀಚಿಗೆ ನಮಗೆ ಬಂದಿರತಕ್ಕಂಥ ಸುದ್ದಿಯ ಪ್ರಕಾರ, ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ ಹೊಳಲ್ಕೆರೆ, ಚಿಳ್ಳಕೆರೆ, ನಾಯಕನಹಟ್ಟಿ ಜಾತ್ರೆಯಾದ ಮೇಲೆ ಕೆಲವು ಜನರು ಸತ್ತುಹೋಗಿದ್ದಾರೆ ಎಂದು. ಇದು ಯಾವ ರೀತಿ ಆಯಿತು, ಏನು ನೀರಿನಿಂದ ಆಗಿದೆಯೋ ಅಥವಾ ಇದು ಕಾಲರಾನೋ ಅಥವಾ ಬೇರೆ ಫುಡ್ ಮೂಲಕ ಬಂದಿದೆಯೋ ಎನ್ನುವುದನ್ನು ಕಂಡುಹಿಡಿಯಲು ಒಂದು ಟೀಮ್ ಆಫ್ ಡಾಕ್ಟರ್ಸನ್ನು, ಎಕ್ಸ್‌ಪರ್ಟ್ ಡಾಕ್ಟರ್ಸನ್ನು ದಯವಿಟ್ಟು ಅಲ್ಲಿಗೆ ಕಳುಹಿಸಿಕೊಡಬೇಕು ಮತ್ತು ಅಲ್ಲಿ ಮೆಡಿಸನ್‌ಗಳನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಯಾರು ಜನರು ಚಕ್ಕಡಿಯಲ್ಲಿ ಬರುತ್ತಿದ್ದರು ಅವರು ಮಧ್ಯದಲ್ಲಿಯೇ ಅಸು ನೀಗಿದ್ದಾರೆ. ಇಂಥ ಪರಿಸ್ಥಿತಿ ಇದೆ. ದಯವಿಟ್ಟು ಇದರ ಬಗ್ಗೆ ಸರ್ಕಾರದವರು ಗಮನಹರಿಸಿ ತಕ್ಷಣ ಮೆಡಿಸನ್, ಎಕ್ವಿಪ್‌ಮೆಂಟ್ಸ್ ಮತ್ತು ಎಕ್ಸ್‌ಪರ್ಟ್ಸ್ ಸ್ಟಾಫನ್ನು ಕಳುಹಿಸಿಕೊಡಬೇಕು, ಮತ್ತು ಅದನ್ನು ತಡೆಗಟ್ಟಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೇ, ವಿವರವಾದಂಥ ಒಂದು ಹೇಳಿಕೆಯನ್ನು ನಾನು ಇವತ್ತು ಮಧ್ಯಾಹ್ನದ ಹನ್ನೆರಡೂವರೆ ಗಂಟೆ ಒಳಗಡೆ ಮಾಡುತ್ತೇನೆ.